






## ಕೊಳೆಯಲ್ಲೂ ಕಲೆ

(6ನೇ ಪುಟ ನೋಡಿ)

ನಿಕಿತ ತನ್ನ ಚಿತ್ರಗಳನ್ನು 'ಡರ್ಟಿ ಪೇಂಟಿಂಗ್' ಎಂದು ಕರೆಯುತ್ತಾನೆ. ಚಿತ್ರ ಬಿಡಿಸಿದ ಮೇಲೆ **ProBoyNick** ಎಂದು ಸಹಿ ಮಾಡುತ್ತಾನೆ. ಈ ಚಿತ್ರಗಳ ಆಯುಷ್ಯ ಕಡಿಮೆ; ಆದರೆ ಈತನ ಕೀರ್ತಿ ಕಡಿಮೆಯಾಗಿಲ್ಲ. ವಾಹನಗಳ ಮೇಲೆ ಮೈತಳೆಯುವ ಚಿತ್ರಗಳ ಕಾಪಿರೈಟ್ ಕೂಡಾ ಈತನೊಂದಿಗೆ ಇರುವುದಿಲ್ಲ. ಆ ವಾಹನಗಳೋ ಮಳೆಯಲ್ಲಿ, ಬಿಸಿಲಲ್ಲಿ, ದೂಳಿನಲ್ಲಿ ಎಲ್ಲೆಲ್ಲೋ ಓಡಾಡುವಾಗ ಈತನ ಚಿತ್ರಗಳೂ ಚಿತ್ರಾನ್ನವಾಗುತ್ತವೆ. ವಾಹನದ ಮೇಲೆ ದೂಳು ಹೆಚ್ಚಾದರೂ ಈ ಚಿತ್ರಗಳು ಮಸುಕಾಗುತ್ತವೆ; ದೂಳು ಕಡಿಮೆಯಾದರೂ ಮರೆಯಾಗುತ್ತವೆ. ಮಳೆ ಬಂದರಂತೂ ಕರಗಿ ನೀರಾಗಿ ಹೋಗುತ್ತವೆ.

ಅಷ್ಟಿದ್ದೂ ಈ ಡರ್ಟಿ ಪೇಂಟಿಂಗ್ ಕಲಾಭಿಮಾನಿಗಳಲ್ಲಿ ಉಂಟು ಮಾಡಿರುವ ರೋಮಾಂಚನವಂತೂ ಕಡಿಮೆಯಾಗಿಲ್ಲ. ಒಮ್ಮೆ ಬಿಡಿಸಿದ ಚಿತ್ರವನ್ನು ಅಭಿಮಾನಿಗಳು ಫೋಟೊ ತೆಗೆದು ಅಂತರ್ಜಾಲದಲ್ಲಿ ಪ್ರದರ್ಶಿಸಿದ ಬಳಿಕ ಆ ಚಿತ್ರ ಇನ್ನೊಂದು ರೂಪದಲ್ಲಿ ಶಾಶ್ವತ ಸ್ಥಾನ ಪಡೆಯುತ್ತಿದೆ. ಕಲೆ ಹೊಸ ಹೊಸ ಮಾಧ್ಯಮಗಳಲ್ಲಿ ಮೈತಳೆಯುವ ಕಾಲವಿದು. ಆದರೆ ಬೆರಳೇ ಬ್ರಷ್ ಆಗುವ, ಕ್ಯಾನ್ವಾಸ್ ಕಣ್ಮರೆಯಾಗುವ ಈ ಕಲೆಯಂತೂ ಎಲ್ಲಕ್ಕಿಂತ ವಿಭಿನ್ನ.